ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.
ಸಂಖ್ಯೆ : ವಾಇ : ಉ ನಿ : ಸುಮಪ : 2017–18 ದಿನಾಂಕ: 22–9–2017

# ಪತ್ರಿಕಾ ಆಮಂತ್ರಣ

## ಪತ್ರಿಕಾ ಪ್ರಕಟಣೆ

ಸಂಖ್ಯೆ:109/229

## ಕರ್ನಾಟಕ ಗೃಹ ಮಂಡಳಿಯಿಂದ ಉತ್ತಮ ಗಣಮಟ್ಟದ ಪ್ಲಾಟ್ ಹಂಚಿಕೆ

– ಸಚಿವ ಎಂ. ಕೃಷ್ಣಪ್ಪ

ಬೆಂಗಳೂರು, ಸೆಪ್ಟೆಂಬರ್ 21 ( ಕರ್ನಾಟಕ ವಾರ್ತೆ) :

ಬೆಂಗಳೂರಿನ ಕೆಂಗೇರಿ ಉಪನಗರ, ಬಂಡೇಮಠ ಹಾಗೂ ಸೂರ್ಯ ನಗರದಲ್ಲಿ ಕರ್ನಾಟಕ ಗೃಹ ಮಂಡಳಿ ಸುಸಜ್ಜಿತವಾದ, ಉತ್ತಮ ಗುಣಮಟ್ಟದ ಹಾಗೂ ಮೂಲಸೌಕರ್ಯಗಳನ್ನು ಒಳಗೊಂಡ ವಿವಿಧ ವರ್ಗದ ಪ್ಲಾಟ್‌ಗಳನ್ನು ನಿರ್ಮಿಸಿದೆ ಎಂದು ವಸತಿ ಸಚಿವ ಎಂ. ಕೃಷ್ಣಪ್ಪ ಅವರು ತಿಳಿಸಿದರು.

ಇಂದು ಕೆಂಗೇರಿಯ ಉಪನಗರದಲ್ಲಿನ ಕೆ.ಹೆಚ್.ಬಿ. ಪ್ಲಾಟಿನಂ ಕ್ಲಬ್ ಹೌಸ್‌ನಲ್ಲಿ ಸ್ಥಳದಲ್ಲಿಯೇ ಪ್ಲಾಟ್ ಹಂಚಿಕೆ ಮಾಡುವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ ಕೆಂಗೇರಿ ಪ್ಲಾಟಿನಂನಲ್ಲಿ 411 ಪ್ಲಾಟ್‌ಗಳು, ಕೆಂಗೇರಿ ಡೈಮಂಡ್‌ನಲ್ಲಿ 206 ಹಾಗೂ ಸೂರ್ಯ ಎಲಿಗೆನ್ಸ್‌ನಲ್ಲಿ 326 ಪ್ಲಾಟ್‌ಗಳು ಹಂಚಿಕೆಗೆ ಲಭ್ಯವಿರುತ್ತದೆ ಎಂದು ತಿಳಿಸಿದರು.

ಉತ್ತಮ ಗುಣಮಟ್ಟದ ಈ ಪ್ಲಾಟ್‌ಗಳು ನೀರು, ವಿದ್ಯುತ್, ಒಳಚರಂಡಿ ಹಾಗೂ ಸಕಲ ಸೌಲಭ್ಯಗಳನ್ನು ಒಳಗೊಂಡಿರುತ್ತದೆ. ಪ್ಲಾಟ್‌ಗಳನ್ನು ಖರೀದಿಸುವವರಿಗೆ ಬ್ಯಾಂಕಿನಲ್ಲಿ ಸಾಲ ಪಡೆದುಕೊಳ್ಳಲು ಜಾಮೀನನ್ನು ಕರ್ನಾಟಕ ಗೃಹ ಮಂಡಳಿಯೇ ನೀಡುತ್ತದೆ. ಆದ್ದರಿಂದ ಯಾವುದೇ ಬ್ಯಾಂಕ್‌ಗಳು ಸಾಲ ನೀಡಲು ಹಿಂಜರಿಯುವುದಿಲ್ಲ. ತಕ್ಷಣವೇ ಸಾಲ ಮಂಜೂರು

ಮಾಡಿ ಕೊಡುಲಾಗುತ್ತದೆ ಎಂದು ಕರ್ನಾಟಕ ಗೃಹ ಮಂಡಳಿಯ ಅಧ್ಯಕ್ಷ ಮಾಲೀಕಯ್ಯ ಗುತ್ತೇದಾರ್ ಅವರು ತಿಳಿಸಿದರು.

ಕೆಂಗೇರಿಯ ಕೆ.ಹೆಚ್.ಬಿ. ಪ್ಲಾಟಿನಂನಲ್ಲಿ ಪ್ರತಿ ಚದುರ ಅಡಿ 3,300 ರೂ, ಕೆಂಗೇರಿಯ ಕೆ.ಹೆಚ್.ಬಿ. ಡೈಮಂಡ್‌ನಲ್ಲಿ ಪ್ರತಿ ಚ.ಅ. ಗೆ 2,800 ರೂ. ಹಾಗೂ ಸೂರ್ಯನಗರದ ಮೊದಲನೇ ಹಂತದ ಪ್ಲಾಟ್‌ಗಳಿಗೆ ಪ್ರತಿ ಚ.ಅ. ಗೆ 2,950 ರೂ.ಗಳಿಗೆ ಲಭ್ಯವಿದೆ. ಕರ್ನಾಟಕ ಗೃಹ ಮಂಡಳಿಯು ನಿರ್ಮಿಸಿರುವ ಉತ್ತಮ ಗುಣಮಟ್ಟದ ಪ್ಲಾಟ್‌ಗಳು ಬೆಂಗಳೂರಿನಲ್ಲಿ ಇಷ್ಟು ಕಡಿಮೆ ಬೆಲೆಗೆ ಸಿಗುತ್ತಿರುವುದು ನಿಮ್ಮ ಸೌಭಾಗ್ಯ ಮತ್ತು ಈ ಪ್ಲಾಟ್‌ಗಳಲ್ಲಿ ವಾಸಮಾಡಲು ಎಲ್ಲಾ ರೀತಿಯ ಮೂಲಭೂತ ಸೌಕರ್ಯಗಳು ಇವೆ ಎಂದು ಸ್ಥಳೀಯ ಶಾಸಕ ಸೋಮಶೇಖರ್ ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಸ್ಥಳೀಯ ಮಹಾನಗರ ಪಾಲಿಕೆ ಸದಸ್ಯರು, ಕರ್ನಾಟಕ ಗೃಹ ಮಂಡಳಿಯ ನಿರ್ದೇಶಕರುಗಳು, ಕರ್ನಾಟಕ ಗೃಹ ಮಂಡಳಿಯ ಆಯುಕ್ತ ಎ.ಬಿ. ಇಬ್ರಾಹಿಂ, ಹಾಗೂ ಮುಖ್ಯ ಅಭಿಯಂತರರಾದ ಗಣೇಶ್ ಮತ್ತು ಇತರೆ ಜನಪ್ರತಿನಿಧಿಗಳು, ಅಧಿಕಾರಿಗಳು ಉಪಸ್ಥಿತರಿದ್ದರು.

*****

ಕೆಎನ್‌ಕೆ:ಕೆಎನ್‌ವಿ:ಜಿಪಿಆರ್

**ಸಂಖ್ಯೆ:110/230**

## "ವಂಡರ್ಸ್ ಆಫ್ ಲೈಫ್: ವಾಟ್ ಈಸ್ ಲೈಫ್"

ಬೆಂಗಳೂರು, ಸೆಪ್ಟೆಂಬರ್ 22 ( ಕರ್ನಾಟಕ ವಾರ್ತೆ) :

ಜವಾಹರ್‌ಲಾಲ್ ನೆಹರು ತಾರಾಲಯ, ಬೆಂಗಳೂರು ಅಸೋಸಿಯೆಷನ್ ಫಾರ್ ಸೈನ್ಸ್ ಎಜುಕೇಷನ್ ಸಹಯೋಗದಲ್ಲಿ ಈ ತಿಂಗಳ ಚಲನಚಿತ್ರ "ವಂಡರ್ಸ್ ಆಫ್ ಲೈಫ್: ವಾಟ್ ಈಸ್ ಲೈಫ್" ನ್ನು ಸೆಪ್ಟೆಂಬರ್ 24 ರ ಭಾನುವಾರದಂದು ಸಂಜೆ 5.00 ಗಂಟೆಗೆ ಜವಾಹರ್‌ಲಾಲ್ ನೆಹರು ತಾರಾಲಯ, ಶ್ರೀ ಟಿ. ಚೌಡಯ್ಯ ರಸ್ತೆ, ಹೈಗ್ರೌಂಡ್ಸ್, ಬೆಂಗಳೂರು –560 001 ಇಲ್ಲಿ ಪ್ರದರ್ಶಿಸಲಿದೆ. ಚಲನಚಿತ್ರದ ಅವಧಿ 60 ನಿಮಿಷಗಳು. ಹೆಚ್ಚಿನ ವಿವರಗಳಿಗಾಗಿ ದೂರವಾಣಿ ಸಂಖ್ಯೆ 22379725 ಅಥವಾ http://www.taralaya.org/monthly-movie.php ನ್ನು ಸಂಪರ್ಕಿಸಬಹುದಾಗಿದೆ.

**ಸಂಖ್ಯೆ:111/231**

## ಬೈಸಿಕಲ್ ರ‍್ಯಾಲಿ

ಬೆಂಗಳೂರು, ಸೆಪ್ಟೆಂಬರ್ 22 ( ಕರ್ನಾಟಕ ವಾರ್ತೆ) :

ಸಕಾಲ ಸೇವೆಗಳ ಜನಜಾಗ್ರತಿ ಸಲುವಾಗಿ ನಾಗರಿಕರಲ್ಲಿ ಜನಜಾಗೃತಿ ಮೂಡಿಸುವ ಸಲುವಾಗಿ ಬೈಸಿಕಲ್ ರ‍್ಯಾಲಿ ಕಾರ್ಯಕ್ರಮವನ್ನು ಸೆಪ್ಟೆಂಬರ್ 24 ರಂದು ಬೆಳಿಗ್ಗೆ 7-30 ಗಂಟೆಗೆ ಕಂಠೀರವ ಹೊರಾಂಗಣ ಕ್ರೀಡಾಂಗಣದ ಕಸ್ತೂರ್‌ಬಾ ರಸ್ತೆಯಲ್ಲಿರುವ ಮುಖ್ಯ ದ್ವಾರದಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಈ ರ‍್ಯಾಲಿಗೆ ಬೈಸಿಕಲ್‌ನೊಂದಿಗೆ ಆಗಮಿಸಲು ಇಚ್ಛಿಸುವ ಎಲ್ಲಾ ಅಧಿಕಾರಿ/ಸಿಬ್ಬಂದಿಗಳು ತಮ್ಮ ಹೆಸರುಗಳನ್ನು ದಿನಾಂಕ 18-9-2017 ರ ಮಧ್ಯಾಹ್ನ 2-00 ಗಂಟೆಯೊಳಗೆ ಮೊಬೈಲ್ ಸಂಖ್ಯೆ 94482 14650 / 91640 93376 ಗೆ ಎಸ್.ಎಂ.ಎಸ್./ವಾಟ್ಸಾಪ್ ಮುಖಾಂತರ ನೋಂದಾಯಿಸಿಕೊಳ್ಳಲು ಕೋರಿದೆ. ಮೊದಲು ನೋಂದಾವಣಿ ಮಾಡಿ ಜಾಥಾದಲ್ಲಿ ಭಾಗವಹಿಸುವ 300 ಭಾಗೀದಾರರಿಗೆ ಸಕಾಲ ಲೋಗೋ ಹೊಂದಿರುವ ಟೀ-ಶರ್ಟ್‌ನ್ನು ವಿತರಿಸಲಾಗುವುದು.

ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ವಿವಿಧ ಇಲಾಖೆ ಅಧಿಕಾರಿಗಳು/ನೌಕರರಿಗೆ ಸೂಚಿಸುವಂತೆ ಕೋರಲಾಗಿದೆ. ಸೈಕಲ್ ಜಾಥಾವನ್ನು ಕಂಠೀರವ ಕ್ರೀಡಾಂಗಣದಿಂದ ಆರಂಭಿಸಿ ಮ್ಯೂಸಿಯಂ ರಸ್ತೆ, ಜಿವೆಲ್ಸ್ ಡಿ ಪ್ಯಾರಾಗನ್, ಕ್ವೀನ್ಸ್ ರಸ್ತೆ, ಜಿ.ಪಿ.ಓ. ಉಚ್ಚ ನ್ಯಾಯಾಲಯ, ವಿಧಾನ ಸೌಧ, ರಾಜಭವನ, ಭಗವಾನ್ ಮಹಾವೀರ ರಸ್ತೆ, ಮಿನ್ಸ್‌ಸ್ಕೇರ್, ಕಬ್ಬನ್ ರಸ್ತೆ, ಡಿಕೆನ್ಸ್‌ಸನ್ ರಸ್ತೆ, ಹಲಸೂರು ರಸ್ತೆ, ಹಲಸೂರು ಕೆರೆ, ಮರ್‌ಫೀ ರಸ್ತೆ, ಬಲಕ್ಕೆ ಸ್ವಾಮಿ ವಿವೇಕಾನಂದ ರಸ್ತೆ ಮೂಲಕ ಹಲಸೂರು ಪೊಲೀಸ್ ಸ್ಟೇಷನ್, ಲಿಡೋ, ಟ್ರಿನಿಟಿ ಸರ್ಕಲ್, ಎಂ.ಜಿ. ರಸ್ತೆ, ಕಸ್ತೂರ್‌ಬಾ ರಸ್ತೆ ಮೂಲಕ ಕಂಠೀರವ ಕ್ರೀಡಾಂಗಣದಲ್ಲಿ ಲಘು ಉಪಹಾರದೊಂದಿಗೆ ಮುಕ್ತಾಯಗೊಳಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

**ಸಂಖ್ಯೆ:112/232**

## ಪತ್ರಿಕೋದ್ಯಮ ಪ್ರಶಸ್ತಿಗಳ ನಗದು ಬಹುಮಾನದ ಮೊತ್ತ ಹೆಚ್ಚಳ

ಬೆಂಗಳೂರು, ಸೆಪ್ಟೆಂಬರ್ 22 ( ಕರ್ನಾಟಕ ವಾರ್ತೆ) :

ಕನ್ನಡ ಪತ್ರಿಕೋದ್ಯಮ ಕ್ಷೇತ್ರದಲ್ಲಿ ಗಮನಾರ್ಹ ಸಾಧನೆ ಮಾಡಿದ ಪತ್ರಕರ್ತರನ್ನು ಗುರುತಿಸಿ ಗೌರವ ನೀಡುವ ಸಲುವಾಗಿ ರಾಜ್ಯ ಸರ್ಕಾರ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ನೀಡುವ ಟಿ.ಎಸ್.ಆರ್. ಸ್ಮಾರಕ ಪತ್ರಿಕೋದ್ಯಮ ಪ್ರಶಸ್ತಿ, ಮೊಹರೆ ಹಣಮಂತರಾಯ ಪ್ರಶಸ್ತಿ ಮತ್ತು ಪರಿಸರ, ಅಭಿವೃದ್ಧಿ ಪತ್ರಿಕೋದ್ಯಮ ಪ್ರಶಸ್ತಿಗಳ ಮೊತ್ತವನ್ನು ಹೆಚ್ಚಿಸಿ ಸರ್ಕಾರ ಆದೇಶ ಹೊರಡಿಸಿದೆ.

ಟಿಯೆಸ್ಸಾರ್ ಸ್ಮಾರಕ ಪತ್ರಿಕೋದ್ಯಮ ಪ್ರಶಸ್ತಿ ಮತ್ತು ಮೊಹರೆ ಹಣಮಂತರಾಯ ಪ್ರಶಸ್ತಿಗಳ ಮೊತ್ತವನ್ನು ರೂ. 1.00 ಲಕ್ಷ ದಿಂದ ರೂ. 2.00 ಲಕ್ಷಗಳಿಗೆ ಹಾಗೂ ಪರಿಸರ ಪತ್ರಿಕೋದ್ಯಮ ಪ್ರಶಸ್ತಿ ಹಾಗೂ ಅಭಿವೃದ್ಧಿ ಪತ್ರಿಕೋದ್ಯಮ ಪ್ರಶಸ್ತಿ ಮೊತ್ತವನ್ನು ರೂ. 50,000 ಗಳಿಂದ 1.00 ಲಕ್ಷ ರೂ.ಗಳಿಗೆ ಹೆಚ್ಚಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

**ಸಂಖ್ಯೆ:113/233**

## ಮೈಸೂರು ಮಿನರಲ್ಸ್ ಸಂಸ್ಥೆಯಿಂದ ಗ್ರಾಹಕರ ಜೊತೆ ಸಂವಾದ ಕಾರ್ಯಕ್ರಮ

ಬೆಂಗಳೂರು, ಸೆಪ್ಟೆಂಬರ್ 22 ( ಕರ್ನಾಟಕ ವಾರ್ತೆ) :

ಮೈಸೂರು ಮಿನರಲ್ಸ್ ಸಂಸ್ಥೆಯು ಗ್ರಾಹಕರ ಜೊತೆ ಸಂವಾದ ಕಾರ್ಯಕ್ರಮವನ್ನು ಇತ್ತೀಚೆಗೆ ಏರ್ಪಡಿಸಿತ್ತು. ಸಂಸ್ಥೆಯ ಅಧ್ಯಕ್ಷರು ಹಾಗೂ ಗಣಿ ಮತ್ತು ಭೂ ವಿಜ್ಞಾನ ಸಚಿವ ವಿನಯ್ ಕುಲಕರ್ಣಿ ಅವರು ಸಭೆಯನ್ನು ಉದ್ಘಾಟಿಸಿ ಸಂಸ್ಥೆಯ ಉತ್ಪನ್ನಗಳನ್ನ ಮಾರುಕಟ್ಟೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಗ್ರಾಹಕರು ನೀಡಿದ ಸಲಹೆಗಳನ್ನು ಆಲಿಸಿ ಈ ಬಗ್ಗೆ ಸಕಾರಾತ್ಮಕವಾಗಿ ಕ್ರಮಕೈಗೊಳ್ಳುವುದಾಗಿ ತಿಳಿಸಿದರು. ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ನವೀನ್ ರಾಜ್ ಸಿಂಗ್ ಅವರು ಸಂಸ್ಥೆಯ ಉತ್ಪನ್ನಗಳ ಮಾರುಕಟ್ಟೆ ಅಭಿವೃದ್ಧಿಗೆ ತೆಗೆದುಕೊಳ್ಳುತ್ತಿರುವ ಕ್ರಮಗಳಗೆ ಬಗ್ಗೆ ಮಾಹಿತಿ ನೀಡಿದರು.

ಛಾಯಚಿತ್ರ ಶೀರ್ಷಿಕೆ:

ಮೈಸೂರು ಮಿನರಲ್ಸ್ ಸಂಸ್ಥೆಯು ಗ್ರಾಹಕರ ಸಂವಾದ ಕಾರ್ಯಕ್ರಮ ಏರ್ಪಡಿಸಿದ್ದು ಗಣಿ ಮತ್ತು ಭೂ ವಿಜ್ಞಾನ ಸಚಿವ ವಿನಯ್‌ಕುಲಕರ್ಣಿ ಅವರು ಕಾರ್ಯಕ್ರಮ ಉದ್ಘಾಟಿಸಿದರು. ವ್ಯವಸ್ಥಾಪಕ ನಿರ್ದೇಶಕ ನವೀನ್ ರಾಜ್ ಸಿಂಗ್ ಚಿತ್ರದಲ್ಲಿದ್ದಾರೆ.

**ಸಂಖ್ಯೆ:114/234**

# ಕೃಷಿ ಭಾಗ್ಯ ಯೋಜನೆ: ಅರ್ಜಿ ಆಹ್ವಾನ

<u>ಬೆಂಗಳೂರು, ಸೆಪ್ಟೆಂಬರ್ 22 ( ಕರ್ನಾಟಕ ವಾರ್ತೆ) :</u>

2017-18 ನೇ ಸಾಲಿನ ಕೃಷಿ ಭಾಗ್ಯ ಯೋಜನೆಯಡಿ ತೋಟಗಾರಿಕಾ ಇಲಾಖೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಸಾಮಾನ್ಯ ವರ್ಗದ ರೈತರು ಪಾಲಿಹೌಸ್ ನೆರಳು ಪರದೆ, ಕೃಷಿ ಹೊಂಡ ನಿರ್ಮಿಸಿಕೊಳ್ಳಲು ಧನ ಸಹಾಯಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸೇರಿದ ದೊಡ್ಡಬಳ್ಳಾಪುರ, ದೇವನಹಳ್ಳಿ, ಹೊಸಕೋಟೆ ಮತ್ತು ನೆಲಮಂಗಲ ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು, ಈ ವ್ಯಾಪ್ತಿಯಲ್ಲಿ ಬರುವ ರೈತರು ಸಂಬಂಧಪಟ್ಟ ತಾಲ್ಲೂಕುಗಳ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಹಾಗೂ ಸಹಾಯಕ ತೋಟಗಾರಿಕೆ ನಿರ್ದೇಶಕರು ಅವರ ಕಛೇರಿಗೆ ಸಂಪರ್ಕಿಸಿ ದಿನಾಂಕ 25-9-2017 ರಿಂದ ದಿನಾಂಕ 19-10-2017 ರೊಳಗೆ ನಿಗಧಿತ ದಾಖಲೆಗಳೊಂದಿಗೆ ಅರ್ಜಿಯನ್ನು ಸಲ್ಲಿಸಿ ಈ ಯೋಜನೆಯ ಸದುಪಯೋಗ ಪಡೆದುಕೊಳ್ಳಬಹುದಾಗಿದೆ.

ಗುರಿಗಿಂತ ಹೆಚ್ಚಿನ ಅರ್ಜಿಗಳು ಸ್ವೀಕೃತವಾದಲ್ಲಿ ಫಲಾನುಭವಿಗಳನ್ನು ನಿಯಮಾನುಸಾರ ಲಾಟರಿ ಪ್ರಕ್ರಿಯೆ ಮೂಲಕ ಆಯ್ಕೆ ಮಾಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿಪಂ) ದೊಡ್ಡಬಳ್ಳಾಪುರ ತಾಲ್ಲೂಕು 080-27623770, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿಪಂ) ದೇವನಹಳ್ಳಿ ತಾಲ್ಲೂಕು 08027681204, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು(ಜಿಪಂ) ಹೊಸಕೋಟೆ 080-27904760, ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿಪಂ) ನೆಲಮಂಗಲ 080- 27726213 ಇಲಾಖೆಯ ಅಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

**ಸಂಖ್ಯೆ:115/235**

## <u>ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ತರಬೇತಿ ಶಿಬಿರ</u>

<u>ಬೆಂಗಳೂರು, ಸೆಪ್ಟೆಂಬರ್ 22 ( ಕರ್ನಾಟಕ ವಾರ್ತೆ) :</u>

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ನಿರುದ್ಯೋಗ ಯುವಕ-ಯುವತಿಯರಿಗಾಗಿ ಉದ್ಯೋಗ ಒದಗಿಸಿಕೊಡುವ ನಿಟ್ಟಿನಲ್ಲಿ "ಸರಕು ಮತ್ತು ಸೇವಾ ತೆರಿಗೆ" (ಜಿ.ಎಸ್.ಟಿ.) ತರಬೇತಿ ಶಿಬಿರವನ್ನು ದಿನಾಂಕ 25-9-2017 ರಿಂದ 28-9-2017 ರವರೆಗೆ ಬೆಂಗಳೂರಿನ ರಾಜ್ಯ ಯುವ ಕೇಂದ್ರದ 3 ನೇ ಮಹಡಿಯಲ್ಲಿ ಏರ್ಪಡಿಸಿದೆ.

ಈ ತರಬೇತಿ ಶಿಬಿರವು 04 ದಿನಗಳ ಕಾಲ ನಡೆಯುತ್ತದೆ. ವಯೋಮಿತಿ 21 ರಿಂದ 35 ವರ್ಷದೊಳಗಿರಬೇಕು. ವಿದ್ಯಾರ್ಹತೆ: ಬಿಕಾಂ ಪದವಿ ಹೊಂದಿರಬೇಕು. ಹೊರ ಜಿಲ್ಲೆಗಳಿಂದ ಆಗಮಿಸುವ ಶಿಬಿರಾರ್ಥಿಗಳಿಗೆ ಸಾಮಾನ್ಯ ವಸತಿ ವ್ಯವಸ್ಥೆ ಕಲ್ಪಿಸಲಾಗುವುದು.

ಆಸಕ್ತರು ಎಸ್.ಎಸ್.ಎಲ್.ಸಿ. ಅಂಕಪಟ್ಟಿಯೊಂದಿಗೆ, ಉಪ ನಿರ್ದೇಶಕರು, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು-01. ದೂರವಾಣಿ ಸಂಖ್ಯೆ:080-22214911/9036313131 ಇಲ್ಲಿ ನೋಂದಾಯಿಸಿಕೊಳ್ಳಲು ಪ್ರಕಟಣೆ ತಿಳಿಸಿದೆ.

**ಸಂಖ್ಯೆ:116/236**

## <u>ಸೈನಿಕ ಶಾಲೆ ಕೊಡಗು –</u>
## <u>6 ಮತ್ತು 9 ನೇ ತರಗತಿಯ ದಾಖಲಾತಿಗೆ ಪ್ರವೇಶ ಪರೀಕ್ಷೆ</u>

ಬೆಂಗಳೂರು, ಸೆಪ್ಟೆಂಬರ್ 21 ( ಕರ್ನಾಟಕ ವಾರ್ತೆ) :

ಕೊಡಗು ಸೈನಿಕ ಶಾಲೆ 2018-19 ಸಾಲಿನ 6 ಮತ್ತು 9ನೇ ತರಗತಿಯ ವಿದ್ಯಾರ್ಥಿಗಳ ದಾಖಲಾತಿಗಾಗಿ ಅರ್ಜಿಯನ್ನು ಆಹ್ವಾನಿಸಿದೆ.

ವಿದ್ಯಾರ್ಥಿಗಳನ್ನು ರಾಷ್ಟ್ರೀಯ ರಕ್ಷಣಾ ಅಕಾಡೆಮಿ/ಭಾರತೀಯ ನೌಕ ಅಕಾಡೆಮಿಗೆ ಸೇರಿಸಲು ಶೈಕ್ಷಣಿಕವಾಗಿ ಮಾನಸಿಕವಾಗಿ ಮತ್ತು ದೈಹಿಕವಾಗಿ ತರಬೇತಿಗೊಳಿಸಲಾಗುವುದು.

6ನೇ ತರಗತಿಗಾಗಿ 2 ಜುಲೈ 2007 ರಿಂದ 1 ನೇ ಜುಲೈ 2005 ರೊಳಗೆ ಅಭ್ಯರ್ಥಿಯು ಜನಿಸಿರಬೇಕು. 9 ನೇ ತರಗತಿಗಾಗಿ 02 ಜುಲೈ 2004 ರಿಂದ 01 ನೇ ಜುಲೈ 2005 ರೊಳಗೆ ಅಭ್ಯರ್ಥಿಯು ಜನಿಸಿರಬೇಕು. ಅಲ್ಲದೆ ಮಾನ್ಯತೆ ಪಡೆದ ಶಾಲೆಯಲ್ಲಿ 8ನೇ ತರಗತಿ ವಿದ್ಯಾಭ್ಯಾಸ ಮಾಡಿರಬೇಕು.

ಅಭ್ಯರ್ಥಿಯನ್ನು ಅಖಿಲ ಭಾರತ ಮಟ್ಟದ ಸೈನಿಕ ಶಾಲಾ ಪ್ರವೇಶ ಪರೀಕ್ಷೆ, ಮೌಖಿಕ ಸಂದರ್ಶನ ಮತ್ತು ವೈದ್ಯಕೀಯ ತಪಾಸಣೆ ಮೂಲಕ ಅಭ್ಯರ್ಥಿಗಳನ್ನು ಆಯ್ಕೆಮಾಡಲಾಗುವುದು. 6ನೇ ಮತ್ತು 9 ನೇ ತರಗತಿಯ ಪ್ರಶ್ನೆಪತ್ರಿಕೆಗಳು ಕ್ರಮವಾಗಿ 5 ನೇ ಹಾಗೂ 8ನೇ ತರಗತಿಯ ಸಿಬಿಎಸ್‌ಸಿ ಪಠ್ಯಕ್ರಮದ ಆಧಾರದಲ್ಲಿರುತ್ತದೆ.

6ನೇ ತರಗತಿಗೆ 90 ರಿಂದ 100 ಸೀಟುಗಳಿದ್ದು, 9 ನೇ ತರಗತಿಗಾಗಿ 15–20 ಸೀಟುಗಳಿದ್ದು, ಪರಿಶಿಷ್ಟ ಜಾತಿಯವರಿಗೆ ಶೇ 15 ಹಾಗೂ ಪರಿಶಿಷ್ಟ ಪಂಗಡದವರಿಗೆ ಶೇ 7.5 ಹಾಗೂ ರಕ್ಷಣ ಇಲಾಖೆಯವರಿಗೆ ಶೇ 25 ರಷ್ಟು ಮೀಸಲಾತಿ ಇರುತ್ತದೆ.

ಪ್ರಸ್ತುತ ವಾರ್ಷಿಕ ಶೈಕ್ಷಣಿಕ ತರಬೇತಿ ಶುಲ್ಕ ಮತ್ತು ಆಹಾರದ ಶುಲ್ಕ ಒಳಗೊಂಡಂತೆ ರೂ 1,07,000 ಆಗಿರುತ್ತದೆ. ಪ್ರತಿವರ್ಷ ಶೇ 10 ರಷ್ಟು ಶುಲ್ಕವು ಹೆಚ್ಚಾಗುವ ಸಾಧ್ಯತೆಯಿದ್ದು ಇತರೆ ಖರ್ಚುಗಳು ಅನ್ವಯಿಸುವ ದರದಲ್ಲಿ ಭರಿಸತಕ್ಕದ್ದು.

ಉತ್ತಮ ಶ್ರೇಣಿ /ಆದಾಯಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿ ವೇತನವನ್ನು ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ಪ್ರತ್ಯೇಕ ವಿದ್ಯಾರ್ಥಿ ವೇತನವನ್ನು ನೀಡಲಾಗುವುದು. ರಕ್ಷಣಾ ಇಲಾಖೆ ವಿದ್ಯಾರ್ಥಿ ವೇತನವನ್ನು ಹಾಲಿ ಸೇವೆ ಸಲ್ಲಿಸುತ್ತಿರುವ/ಸೇವೆಯಿಂದ ನಿವೃತಿ ಹೊಂದಿರುವ ರಕ್ಷಣಾ ಇಲಾಖಾ ಯೋಧರ ಮಕ್ಕಳಿಗೆ ನೀಡಲಾಗುವುದು.

ಅರ್ಜಿಗಾಗಿ ಅಕ್ಟೋಬರ್/ನವೆಂಬರ್ 2017 ರಲ್ಲಿ ಶಾಲೆಯ ವೆಬ್‌ಸೈಟ್ www.sainikschoolkodagu.edu.in ನ್ನು ಸಂಪರ್ಕಿಸಿ ಮಾಹಿತಿ ಪುಸ್ತಕ/ಅರ್ಜಿಯನ್ನು ಡೌನ್‌ಲೋಡ್ ಮಾಡಬಹುದು ಅಥವಾ ಶಾಲೆಯಿಂದ ಖುದ್ದಾಗಿ ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ಶಾಲೆಯ ದೂರವಾನಿ 08276–278963 ನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

*****

ಜೆಡಿ:ಜೆಪಿಆರ್